ST. FRANCIS DE SALES COLLEGE
A FRANSALIAN INSTITUTE OF HIGHER EDUCATION AUTONOMOUS
NAAC A GRADE • AFFILIATED TO BANGALORE UNIVERSITY • AICTE APPROVED • 2(F) & 12 (B) RECOGNITION OF UGC • ISO 9001:2015 CERTIFIED
Electronics City P.O, Bengaluru - 560 100, Karnataka, INDIA (+91) 8088140679 pro@sfscollege.in www.sfscollege.in

# END SEMESTER EXAMINATION – APRIL/MAY 2026

## KANNADA - IV SEMESTER BBA

## 25BBA41KA: ವ್ಯವಹಾರ ನಿರ್ವಹಣಾ ಕನ್ನಡ IV

**Time: 3 Hours.** **Max. Marks: 80**

**I. ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (200 ಪದಗಳಿಗೆ ಮೀರದಂತೆ)** 3x10=30

1. ಪೊಲೀಸರು ನಾಗಮ್ಮಳಿಗೆ ನೀಡಿದ ಚಿತ್ರಹಿಂಸೆಯನ್ನು ವಿವರಿಸಿ.
2. ಹಿಂಸೆ ಮತ್ತು ಅಹಿಂಸೆಗಳ ಬಹುರೂಪಗಳು ಲೇಖನದ ಆಶಯಗಳನ್ನು ವಿವರಿಸಿ.
3. ಸಮಾಸಗಳಲ್ಲಿ ಎಷ್ಟು ವಿಧಗಳಿವೆ? ಯಾವುದಾದರು ನಾಲ್ಕು ಸಮಾಸಗಳನ್ನು ವಿವರಿಸಿ
4. "ಸಾಂಪ್ರದಾಯಿಕ ಕೃಷಿಯ ಜೊತೆಗೆ ಗ್ರಾಮೀಣ ಆರ್ಥಿಕತೆಗೆ ಹೈನುಗಾರಿಕೆಯೊಂದೇ ಬಲ" ಪಠ್ಯದ ಹಿನ್ನಲೆಯಲ್ಲಿ ವಿವರಿಸಿ.

**II. ನಾಲ್ಕು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (100 ಪದಗಳಿಗೆ ಮೀರದಂತೆ)** 4x5=20

1. ಅಧಿಕಾರದ ಬಗ್ಗೆ ಬಾಹುಬಲಿಯ ವಿಚಾರಗಳೇನು? ಚರ್ಚಿಸಿ.
2. ದುಡಿಮೆಗೆ ಬಿಡುವು ಎನ್ನುವುದೇ ಇಲ್ಲ ಎಂಬುದಕ್ಕೆ ಶಂತನು ಪ್ರಕಾಶ್ ಜೀವಂತ ಸಾಕ್ಷಿ"–ವಿವರಿಸಿ.
3. ಕಮಲಾದೇವಿಯವರು ಭಾಗವಹಿಸಿದ ಹೋರಾಟಗಳ ಬಗ್ಗೆ ಬರೆಯಿರಿ.
4. ಜನರಲ್ ಸ್ಮರ್ಟ್ಸ್‌ಗೆ ಗಾಂಧೀಜಿಯ ಅಹಿಂಸಾ ತತ್ವದ ಅರಿವಾದ ಸಂದರ್ಭವನ್ನು ಚರ್ಚಿಸಿ.
5. ಹೈನುಗಾರಿಕೆಯು ಯಾವ ಯಾವ ಉದ್ಯೋಗಾವಕಾಶಗಳನ್ನು ಸೃಷ್ಟಿಸುತ್ತದೆ ತಿಳಿಸಿ.
6. ಯುದ್ಧ ಮತ್ತು ಶಾಂತಿಗಳ ನಡುವೆ ನಿಮ್ಮ ಆಯ್ಕೆ ಯಾವುದು? ಏಕೆ? ಸಂಕ್ಷಿಪ್ತವಾಗಿ ಬರೆಯಿರಿ.

**III. ಕೆಳಕಂಡ ಕಂಡಿಕೆಯನ್ನು ಇಂಗ್ಲಿಷಿಗೆ ಭಾಷಾಂತರಿಸಿ.** 1x5=5

ಅನ್ಯಾಯವನ್ನು ಗಾಂಧೀಜಿ ಎಂದೂ ಸಹಿಸಿಕೊಳ್ಳುತ್ತಿರಲಿಲ್ಲ. ಅನ್ಯಾಯದ ಸ್ವರೂಪ ಮತ್ತು ಅದರ ಪ್ರಮಾಣಗಳ ಬಹು ಸ್ಪಷ್ಟವಾದ ಕಲ್ಪನೆ ಅವರಿಗಿತ್ತು. ಇದನ್ನು ಕೂಲಂಕಷವಾಗಿ ಪರಿಶೀಲಿಸಿದ ಬಳಿಕವೇ ಅವರು ಮುಂದಿನ ನಿರ್ಧಾರಕ್ಕೆ ಬರುತ್ತಿದ್ದರು. ಅನ್ಯಾಯವೆಂದು ಕಂಡುಬಂದ ಪ್ರಸಂಗಗಳಲ್ಲಿ ಹಿಂಸೆಗೆ ಪ್ರತಿಹಿಂಸೆ ಎನ್ನುವ ಕಲ್ಪನೆ ಅವರಿಗೆ ಅಡ್ಡಬರುತ್ತಿರಲಿಲ್ಲ. ದೇವರ ಗುಡಿಗೆ ಸಮಾನವಾದ ದೇಹದ ಮೇಲೆ ಮಾಡುವ ಹಲ್ಲೆಯನ್ನು ಅವರೆಂದೂ ಕ್ಷಮಿಸುತ್ತಿರಲಿಲ್ಲ.

**IV. ಇನ್ಫೋಸಿಸ್ ಕಂಪನಿಯ ಮ್ಯಾನೇಜರ್ ಹುದ್ದೆಗೆ ಅಭ್ಯರ್ಥನ ಪತ್ರ ತಯಾರಿಸಿ.** 1x5=5

**V. ಕೆಳಕಂಡ ಸನ್ನಿವೇಶ ಆಧರಿಸಿ ಒಂದು ಕವಿತೆ/ಕತೆ ಬರೆದು ಸೂಕ್ತ ಶೀರ್ಷಿಕೆ ನೀಡಿ.** 1x5=5

ಕಟ್ಟಡ ನಿರ್ಮಾಣ ಕಾರ್ಯ ನಡೆಯುವಾಗ ದುರಂತ ಸಂಭವಿಸಿದ ಸಂದರ್ಭ

ST. FRANCIS DE SALES COLLEGE ELECTRONICS CITY, BENGALURU

**VI. ಕೆಳಕಂಡ ಗದ್ಯ ಕಂಡಿಕೆಯನ್ನು ಸಂಭಾಷಣೆಯಾಗಿ ಪರಿವರ್ತಿಸಿ.** **1x5=5**

ಅಂದೂ ಅಂಥದೇ ಭೀಕರ ಕಳವಳ. ತಮ್ಮ ಹಳ್ಳಿಯ ಗತಿ? ಪತ್ನಿ ನಾಗೂ ಗತಿ? ಯಾವುದೂ ತಿಳಿಯಲೊಲ್ಲದು! ಹಠಾತ್ತಾಗಿ ಅಜ್ಞಾತವಾಸಿ ಬೆಚ್ಚಿ ಬಿದ್ದು ಎದ್ದು ಕುಳಿತ. ಹತ್ತಿರದಿಂದ ಸಣ್ಣ ದನಿಯಲ್ಲಿ ಯಾರೋ ಕೂಗಿ ಕರೆದುದು ಕೇಳಿಸಿತು. ಚೆನ್ನಬಸಪ್ಪಾ ಎಂದು. ಕೊನೆಗೂ ಪೋಲೀಸರು ತನ್ನ ಸುಳಿವನ್ನು ಕಂಡುಹಿಡಿದರೋ ಏನೋ, ತನ್ನನ್ನು ಸುಲಭವಾಗಿ ಬಲೆಗೆ ಬೀಳಿಸಲು ಈ ರೀತಿ ಕೂಗುತ್ತಿರುವರೋ ಏನೋ, ಎಂದುಕೊಂಡು ಚೆನ್ನ ಬಸಪ್ಪ ಹತ್ತಿರ ಇದ್ದ ದೊಣ್ಣೆಯನ್ನೆತ್ತಿಕೊಂಡು ಅವರನ್ನೆದುರಿಸಲು ಸಿದ್ಧನಾಗಿ ನಿಂತ. 'ಚೆನ್ನಾ, ಚೆನ್ನಬಸಪ್ಪಾ, ಹಾದಿ ಎಲ್ಲೆ?' ಮತ್ತೆ ಕೇಳಿಸಿತು ಅದೇ ಕೂಗು. ಪೋಲೀಸರ ದನಿಯಲ್ಲ ಅದು; ಅವನಿಗೆ ಚಿರಪರಿಚಿತವಾದ ಕರಿಯಪ್ಪನ ದನಿ. ತಮ್ಮ ಪಕ್ಕದ ಮನೆಯ ಮುದುಕ ಕರಿಯ! ಇಲ್ಲಿಯವರೆಗೆ ಹೇಗೆ ಬಂದನೊ ಎಂದುಕೊಳ್ಳುತ್ತ ಚೆನ್ನಬಸಪ್ಪ ಆತ್ಮಾನಂದದಿಂದ ಮುಂದುವರೆದು ಪೊದೆಯಾಚೆ ನಿಂತುಕೊಂಡು ದಾರಿ ಕಾಣದೆ ಗೋಳಾಡುತ್ತಿದ್ದ ಮುದುಕನನ್ನು ಕರೆದುಕೊಂಡು ಬಂದ.

**VII. ಈ ಕೆಳಗಿನ ಒಂದೊಂದು ಪ್ರಶ್ನೆಗಳಿಗೆ ಸರಿ ಉತ್ತರವನ್ನು ಗುರುತಿಸಿ ಬರೆಯಿರಿ.** **10x1=10**

1. ಪಂಪನಿಂದ ರಚಿತವಾದ ಕೃತಿ.

   ಅ. ಅಜಿತಪುರಾಣ ಆ. ಆದಿಪುರಾಣ ಇ. ಯಶೋಧರ ಚರಿತೆ ಈ. ಶಾಂತಿಪುರಾಣ

2. ಅಜ್ಞಾತವಾಸಿ ಯಾರು?

   ಅ. ಚೆನ್ನಬಸಪ್ಪ ಆ. ಕರಿಯಣ್ಣ ಇ. ಬಸವನಗೌಡ ಈ. ಚೆನ್ನೇಗೌಡ

3. ಅಂತರಾಷ್ಟ್ರೀಯ ಅಹಿಂಸಾ ದಿನ ಎಂದು ಘೋಷಣೆಯಾದ ವರ್ಷ?

   ಅ. 2007 ಆ. 2008 ಇ. 2009 ಈ. 2006

4. ಎಡುಕಾಂಪ್ ಕಂಪನಿಯನ್ನು ಕಟ್ಟಿದ ವರ್ಷ.

   ಅ. 1992 ಆ. 1993 ಇ. 1994 ಈ. 1995

5. ಕಮಲಾದೇವಿಯ ತಾಯಿಯ ಹೆಸರು.

   ಅ. ಗಿರಿಜಾಬಾಯಿ ಆ. ಅನಿಬೆಸೆಂಟ್ ಇ. ಸರೋಜಿನಿ ನಾಯ್ಡು ಈ. ಸೇವಂತಿ

6. ದ್ವಿಗು ಸಮಾಸದ ಪೂರ್ವಪದ ಯಾವ ಪದ ಆಗಿರುತ್ತದೆ?

   ಅ. ಸಂಖ್ಯಾ ವಾಚಕ ಆ. ಗುಣ ವಾಚಕ ಇ. ವಸ್ತು ವಾಚಕ ಈ. ಅಂಶ ವಾಚಕ

7. "ಅಣು ಬೇವು ಬಿತ್ತಿ ಪ್ರೀತಿಯ ಮಾವು ಪಡೆವುದು ಸಾಧ್ಯವೇ?" ಲೇಖನದ ಕರ್ತೃ

   ಅ. ಲಕ್ಷ್ಮಿಪತಿ ಕೋಲಾರ ಆ. ಸರ್ವೇಶ್ವರ್ ದಯಾಳ್ ಇ. ಶಿವಸುಂದರ್ ಈ. ಕುವೆಂಪು

8. ಮನುಷ್ಯ ತಾನು ಮಾಡಿದ್ದನ್ನೇ ವಾಪಸ್ಸು ಪಡೆಯುತ್ತಾನೆ ಎಂಬ ಎಚ್ಚರದ ಮಾತನ್ನು ಹೇಳಿದವರು.

   ಅ. ಪಂಪ ಆ. ಗಾಂಧಿ ಇ. ಬುದ್ಧ ಈ. ಅಂಬೇಡ್ಕರ್

9. ಕೀರ್ತಿವರ್ಮನು ಬರೆದ ಪುಸ್ತಕ.

   ಅ. ಗೋವೈದ್ಯ ಆ. ಪಶು ವೈದ್ಯ ಇ. ನಕುಲ ಸಂಹಿತೆ ಈ. ಶಾಲ ಹೋತ್ರ ಸಂಹಿತೆ

10. ಕರ್ಮಧಾರೆ, ಅಂಶಿ, ತತ್ಪುರುಷ, ಕ್ರಿಯಾ, ಮತ್ತು ಗಮಕ ಇವುಗಳು.........

    ಅ. ಸಮಾಸಗಳು ಆ. ಸಂಧಿಗಳು ಇ. ಅಲಂಕಾರಗಳು ಈ. ವಿಭಕ್ತಿಗಳು

*******

ST. FRANCIS DE SALES COLLEGE
EXCELLENCE • EFFICIENCY • TRANSFORMATION
ELECTRONICS CITY BENGALURU